

**ಕೇಶವ ಶರ್ಮ ಕೆ.**

ಕಲೆ: ಮುರಳೀಧರ ರಾಠೋಡ್

# ದೂರ್ವಾಸಪುರದ ನಾರಣಪ್ಪ

## 1

ನಾನು ಪ್ರತಿ ಎರಡು ತಿಂಗಳಿಗೊಮ್ಮೆ ಉಡುಪಿಯಿಂದ ಔಷಧಿ ತೆಗೆದುಕೊಂಡು ಬರುತ್ತೇನೆ. ಹೀಗೆ ಹೋಗಿ ಬರುವಾಗ ನಡೆದ ಒಂದು ಘಟನೆಯನ್ನು ನಿಮಗೆ ಹೇಳುತ್ತೇನೆ. ಈ ಘಟನೆ ನಡೆದದ್ದು ಆಕಸ್ಮಿಕ ಎಂದು ಅನಿಸುತ್ತದೆ. ಇಂಥಾ ಸನ್ನಿವೇಶ ಬರುತ್ತದೆ ಎಂದು ಯಾರೂ ಊಹಿಸಲಾರರು. ಅದು ನನ್ನ ಜೀವನದಲ್ಲಿ ಅತ್ಯಂತ ಅಚ್ಚರಿಯನ್ನುಂಟು ಮಾಡಿದ ಸಂಗತಿಯೂ ಹೌದು. ಆಗ ನನ್ನ ಹತ್ತಿರ ಒಂದು ಕೆಂಪು ಬಣ್ಣದ ಓಮ್ನಿ ಕಾರು ಇತ್ತು. ತೀರ್ಥಹಳ್ಳಿಯ ಹತ್ತಿರ ಬರುವಾಗ ಕಾರು ನಿಂತಿತು. ಏನು ಮಾಡಿದರೂ ನಾನು ಇನ್ನು ಮುಂದೆ ಹೋಗುವುದಿಲ್ಲ ಎಂದು ಹಟ ಮಾಡಿತು. ಕಾರಿನ ಡ್ರೈವರ್ ಕಾರನ್ನು ತಳ್ಳುವಂತೆ ಹೇಳಿದ. ಕಾರನ್ನು ಒಬ್ಬನೇ ತಳ್ಳುವಷ್ಟು ಶಕ್ತಿ ನನಗೆ ಇದ್ದಿಲ್ಲ. ಕೊನೆಗೆ ಡ್ರೈವರ್ ತೀರ್ಥಹಳ್ಳಿಗೆ ಹೋಗಿ ಮೆಕಾನಿಕ್‌ನನ್ನು ಕರೆದು ತರುತ್ತೇನೆ ಎಂದ. ಅವನು ಆ ಕಡೆಗೆ ಹೋದಮೇಲೆ ಅಲ್ಲೇ ಇದ್ದ ಬಸ್‌ಸ್ಟ್ಯಾಂಡಿನಲ್ಲಿ ಹೋಗಿ ಕುಳಿತೆ. ಅಲ್ಲಿ ಇನ್ನೊಬ್ಬ ಮಾತ್ರವೇ ಇದ್ದ. ಮೂರು ಸಂಜೆಯ ಹೊತ್ತು ಅದು. ಸರಿಯಾದ ಬೆಳಕು ಇಲ್ಲ. ಅತ್ಲಾಗೆ ಅದು ಕತ್ತಲೆಯೂ ಅಲ್ಲ. ಸುಮ್ಮನೆ ಕುಳಿತು ಬೇಜಾರಾಯ್ತು. ಕೂತವನನ್ನು ಮಾತಾಡಿಸಿದೆ. ಅವನು ಸ್ವಲ್ಪ ಕುಡಿದಿದ್ದ ಎಂದು ಕಾಣುತ್ತದೆ. ಕ್ಯಾಕರಿಸಿ ತುಪ್ಪಿದ. “ನೀವು?” ಎಂದೆ. ಅವನು “ನಾನು ನಾರಣಪ್ಪ” ಎಂದ.